ಮಲ್ನಾಡ್‌ಸಿರಿ

# ಸುದ್ದಿ, ಉದ್ಯೋಗಗಳು, ಮತ್ತು ಸರ್ಕಾರಿ ಯೋಜನೆಗೆ www.Malnadsiri.coms

# ಪ್ರಬಂಧ ಮತ್ತು ಪ್ರಯಾಣ ಮಹಿತಿಗೆ www.Malnadsiri.in

# 77ನೇ ಸ್ವಾತಂತ್ರ್ಯ ದಿನಾಚರಣೆ ಭಾಷಣ

**ವೇದಿಕೆ ಮೇಲಿರುವ ಅಧ್ಯಕ್ಷರೇ, ಅತಿಥಿಗಳೇ, ಮುಖ್ಯ ಗುರುಗಳೇ, ಹಾಗೂ ನನ್ನ ಎಲ್ಲ ಶಿಕ್ಷಕ ವೃಂದವೇ ಮತ್ತು ಊರಿನ ಗ್ರಾಮಸ್ಥರೇ ನನ್ನ ಎಲ್ಲ ಸಹೋದರರೇ ಮತ್ತು ಸಹೋದರಿಯರೇ**

**77ನೇ ಸ್ವಾತಂತ್ರ್ಯ ದಿನಾಚರಣೆಯ ಸಂತಸದ ಸಂದರ್ಭದಲ್ಲಿ ತಮ್ಮೆಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತೇನೆ.**

**ಮಧ್ಯರಾತ್ರಿಯ ಗಂಟೆ ಹೊಡೆಯುತ್ತಿದ್ದಂತೆ ಜಗತ್ತು ಮಲಗಿರುವಾಗ ಭಾರತವು ಚಲನಶೀಲತೆ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತದೆ. ಇತಿಹಾಸದಲ್ಲಿ ಅಪರೂಪವಾಗಿ ಬರುವ ಇಂಥ ಈ ಗಳಿಗೆಯಲ್ಲಿ ಹಳತಿನಿಂದ ಹೊಸತಿಗೆ ಕಾಲಿಡುತ್ತಿದ್ದೇವೆ . ಹಳೆಯ ಯುಗ ಮುಗಿದು ಬಹುಕಾಲ ಅದುಮಿಟ್ಟ ದೇಶವೊಂದರ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದೆ….. ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಮುಗಿಸುತ್ತಿದ್ದೇವೆ ಮತ್ತು ಭಾರತವು ತನ್ನನ್ನು ತಾನು ಮತ್ತೆ ಕಂಡುಕೊಳ್ಳುತ್ತಿದೆ**

**ನಮಗೆ 1947 ಆಗಸ್ಟ್ 15 ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿತು . ಅದಕ್ಕಿಂತ ಮೊದಲು ಬ್ರಿಟಿಷರು ನಮ್ಮ ದೇಶವನ್ನು ಆಳುತ್ತಿದ್ದರು .ಬ್ರಿಟಿಷರು ಅಲ್ಲದೆ ಪೋರ್ಚುಗೀಸರು ಡಚ್ಚರು ಫ್ರೆಂಚರು ನಮ್ಮ ದೇಶವನ್ನು ಆಳಿದ್ದಾರೆ .**

ಆದರೆ ಇವರಿಂದ ನಮ್ಮ ದೇಶ ಹೇಗೆ ಸ್ವಾತಂತ್ರವಾಯಿತು ಎಂಬುದನ್ನು ಪ್ರತಿಯೊಬ್ಬ ಭಾರತೀಯನು ತಿಳಿದುಕೊಳ್ಳಬೇಕು .

ನಮ್ಮ ದೇಶ ಸಂಪದ್ಭರಿತ ದೇಶ ಹಲವಾರು ಯುರೋಪಿನ ಸಮುದ್ರಮಾರ್ಗದ ಮೂಲಕ ವ್ಯಾಪಾರ ಮಾಡಲು ಬಂದರು . ನಮ್ಮ ದೇಶದ ರಾಜರು ಅವರಿಗೆ ಅನುಮತಿಯನ್ನು ನೀಡಿದರು .ಆದರೆ ಅವರು ಸುಮ್ಮನೆ ವ್ಯಾಪಾರ ಮಾಡಿಕೊಂಡು ಇರಲಿಲ್ಲ .ನಮ್ಮ ದೇಶದ ಆಂತರಿಕ ವಿಷಯಗಳಲ್ಲಿ ಭಾಗವಹಿಸಲು ಶುರುಮಾಡಿದರು . ನಮ್ಮ ನಮ್ಮಲ್ಲಿ ಯೆ ದ್ವೇಷ ಹುಟ್ಟುವಂತೆ ಮಾಡಿ ತಮ್ಮ ಸಾಮ್ರಾಜ್ಯವನ್ನು ಕಟ್ಟಿದರು .

ನಮ್ಮ ದೇಶದಲ್ಲಿರುವ ಸಂಪತ್ತನ್ನು ಅವರ ದೇಶಗಳಿಗೆ ಸಾಗಿಸಿದರು . ಹಲವಾರು ಭಾರತದ ವಿರೋಧಿ ಕಾನೂನುಗಳನ್ನು ತಂದು ನಮ್ಮ ದೇಶವನ್ನು ಸಂಪೂರ್ಣ ತಮ್ಮ ಕೈವಶ ಮಾಡಿಕೊಂಡರು . ಇದೆಲ್ಲದರ ನಡುವೆ ನಮ್ಮ ದೇಶದಲ್ಲಿ ಬ್ರಿಟಿಷರ ದಬ್ಬಾಳಿಕೆ ವಿರುದ್ಧ ದಂಗೆ ಏಳಲು ಪ್ರಾರಂಭವಾಯಿತು .ಅನೇಕ ಸ್ವಾತಂತ್ರ್ಯ ಸೇನಾನಿಗಳ ಉಗಮವಾಯಿತು . ಇದರ ಸಾಕ್ಷಿಯಾಗಿ 1857 ರಲ್ಲಿ ಮೊದಲ ಭಾರತದ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು .ಇದಕ್ಕೆ ಕಾರಣ ಬ್ರಿಟಿಷರ ದತ್ತು ಮಕ್ಕಳಿಗೆ ಹಕ್ಕಿಲ್ಲ ಮತ್ತು ಸಹಾಯಕ ಸೈನ್ಯ ಪದ್ಧತಿ ಯಂತಹ ಭಾರತ ವಿರೋಧಿ ನೀತಿಗಳು .

ಇದರ ಸಾಕ್ಷಿಯಾಗಿ 1857 ರಲ್ಲಿ ಮೊದಲ ಭಾರತದ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು .ಇದಕ್ಕೆ ಕಾರಣ ಬ್ರಿಟಿಷರ ದತ್ತು ಮಕ್ಕಳಿಗೆ ಹಕ್ಕಿಲ್ಲ ಮತ್ತು ಸಹಾಯಕ ಸೈನ್ಯ ಪದ್ಧತಿ ಯಂತಹ ಭಾರತ ವಿರೋಧಿ ನೀತಿಗಳು . ಈ ಕಾರ್ಯ್ದಗಳಿಂದ ಅನೇಕ ರಾಜರು ತಮ್ಮ ರಾಜ್ಯವನ್ನು ಕಳೆದುಕೊಳ್ಳಬೇಕಾಯಿತು . ಕಿತ್ತೂರುರಾಣಿಚೆನ್ನಮ್ಮ ಜಾನ್ಸಿರಾಣಿ ಲಕ್ಷ್ಮೀಬಾಯಿ ಅನೇಕರು ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದರು . ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ದಿಂದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಆಳ್ವಿಕೆ ಅಂತ್ಯವಾಗಿ ಬ್ರಿಟಿಷ್ ಸರ್ಕಾರದ ಆಳ್ವಿಕೆ ಪ್ರಾರಂಭವಾಯಿತು

ಮುಂದೆ ಅನೇಕ ಹೋರಾಟಗಳು ನಡೆದವು ಹಲವಾರು ಮಹಾನ್ ನಾಯಕರು ಪ್ರಾಣವನ್ನು ಕಳೆದುಕೊಂಡರು .ಬ್ರಿಟಿಷರ ಆಳ್ವಿಕೆ ಅಂತ್ಯ ಕಾಣಿಸಲೇಬೇಕು ಎಂದು ಪಣತೊಟ್ಟರು .

ಬಾಲಗಂಗಾಧರ್ ತಿಲಕ್ , ಲಾಲಾ ಲಜಪತ್ ರಾಯ್ , ಚಂದ್ರಶೇಖರ್ ಆಜಾದ್ ಸುಭಾಷ್ ಚಂದ್ರಬೋಸ್ , ಭಗತ್ ಸಿಂಗ ಮಹಾತ್ಮ ಗಾಂಧೀಜಿ ದಾದಾಬಾಯಿ ನವರೋಜಿ ಅಂತಹ ಹಲವಾರು ಮಹಾನ್ ನಾಯಕರು ಹೋರಾಟಕ್ಕೆ ಧುಮುಕಿದರು .

ಬಾಲಗಂಗಾಧರ್ ತಿಲಕ್ ಅವರು ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ನಾನು ಪಡೆದೇ ತೀರುತ್ತೇನೆ ಎಂದು ಬ್ರಿಟೀಷರಲ್ಲಿ ನಡುಕ ಹುಟ್ಟಿಸಿದರು . ಸುಭಾಷ್ ಚಂದ್ರ ಬೋಸರು ಎರಡನೇ ಮಹಾಯುದ್ಧದಲ್ಲಿ ಸೆರೆಸಿಕ್ಕ ಭಾರತದ ಸೈನಿಕರ ಸಹಾಯದಿಂದ ಬ್ರಿಟಿಷರನ್ನು ಭಾರತದಿಂದ ಓಡಿಸಲು ಹೋರಾಡಿದರು . ಹೀಗೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಭಾರತ ದೇಶದ ಸ್ವಾತಂತ್ರ್ಯಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡರು . 1942 ರಲ್ಲಿ ಭಾರತಬಿಟ್ಟು ತೊಲಗಿ ಎಂಬ ಕ್ರಾಂತಿ ಮೊಳಗಿತ್ತು ಗಾಂಧೀಜಿಯವರು ಮಾಡು ಇಲ್ಲವೆ ಮಡಿ ಎಂಬ ಕರೆಕೊಟ್ಟರು . ಹೀಗೆ ಸ್ವಾತಂತ್ರ್ಯದ ಜ್ವಾಲೆ ಇಡೀ ದೇಶದ ತುಂಬಾ ಹರಡಿತು .

ಕೊನೆಗೆ 1947 ಆಗಸ್ಟ್ 15 ರಂದು ನಮ್ಮ ದೇಶ ಬ್ರಿಟಿಷರಿಂದ ಸ್ವಾತಂತ್ರ್ಯ ವಾಯಿತು .

ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಡಲು ಹಲವಾರು ಮಹನೀಯರು ಶ್ರಮಿಸಿದ್ದಾರೆ . ಹಲವು ಜನ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ . ಅವರೆಲ್ಲರ ತ್ಯಾಗ ಮತ್ತು ಬಲಿದಾನದ ಪರಿಣಾಮವಾಗಿ ನಾವು ಇಂದು ಸ್ವಾತಂತ್ರ್ಯದ ಸವಿಯನ್ನು ಸವಿಯುತ್ತಿದ್ದೇವೆ . ಈ ಸ್ವಾತಂತ್ರವನ್ನು ಉಳಿಸಿಕೊಂಡು ಹೋಗುವುದು ಹಾಗೂ ದೇಶವನ್ನು ಶಕ್ತಿಯುತಗೊಳಿಸುವುದು ನಮ್ಮ ಕರ್ತವ್ಯ ಆಗಿದೆ .

ಕೊನೆಯದಾಗಿ ಮತ್ತೊಮ್ಮೆ ತಮ್ಮೆಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸಿ ಇಷ್ಟೋತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ತಮ್ಮೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸುತ್ತಾ ನನ್ನ ಮಾತನ್ನ ಮುಗಿಸುತ್ತಿದ್ದೇನೆ. ಜೈ ಹಿಂದ್ ಜೈ ಕರ್ನಾಟಕ.